ಆ) ಹಾಗಿದ್ದಲ್ಲಿ ಈ ರೀತಿ ಕ್ರಮ ಕೈಗೊಳ್ಳಲು ಕಾರಣ ಯಾರು ಅವರ ವಿರುದ್ಧ ಏನು ಕ್ರಮ ತೆಗೆದುಕೊಳ್ಳಲಾಗಿದೆ; ಅವರಿಂದ ಎಷ್ಟು ಹಣ ವಸೂಲಿ ಮಾಡಲಾಗಿದೆ.

ಇ) ಕೇಂದ್ರ ಸರ್ಕಾರ ಪ್ರತಿಬಂಧನೆ ವಿಧಿಸಿದ್ದಾಗ್ಯೂ ಸಹಾ ಈ ರೀತಿಯ ಘಟಕ ಸ್ಥಾಪನೆಗೆ ಕಾರಣ ಯಾರು; ಅನಗತ್ಯ ವೆಚ್ಚ ಎಷ್ಟು.

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಇಲ್ಲಾ.

ಆ) ಉದ್ಭವಿಸುವುದಿಲ್ಲ.

ಇ) ಕೇಂದ್ರ ಸರ್ಕಾರವು ವಿಧಿಸಿದ್ದ ಪ್ರತಿಬಂಧನೆಗಳನ್ನು ಪರಿಶೀಲಿಸಿದ ನಂತರ ಈ ಘಟಕವನ್ನು ಸ್ಥಾಪಿಸಿದ್ದು, ಈ ಘಟಕದಲ್ಲಿ ಈಗ ಅಗ್ರಿಗೋಲ್ಡ್ ಎಂಬ ಹರಳು ರೂಪದ ಸಾವಯವ ಗೊಬ್ಬರವನ್ನು ಉತ್ಪಾದಿಸಲಾಗುತ್ತದೆ. ಸದರಿ ಗೊಬ್ಬರವು ಉತ್ಪಾದನೆ ಹಾಗೂ ಮಾರಾಟದಲ್ಲಿ ಉತ್ತಮ ಲಾಭಾಂಶವನ್ನು ಹೊಂದಿರುತ್ತದೆ.

ಮೈಸೂರು ಜಿಲ್ಲೆಯಲ್ಲಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಎನ್.ಜಿ.ಓ.ಗಳ ಪಾತ್ರ

3178 (4198) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿರುವ ಸರ್ಕಾರೇತರ ಸಂಸ್ಥೆಗಳು ಎಷ್ಟು? ಅವು ಯಾವುವು

ಆ) ಈ ಸಂಸ್ಥೆಗಳಿಗೆ ಸರ್ಕಾರದಿಂದ ನೀಡಲಾಗುತ್ತಿರುವ ಸಹಾಯಧನ ಎಷ್ಟು? ಕಳೆದ ಮೂರು ವರ್ಷಗಳ ಸಂಸ್ಥೆವಾರು ಮತ್ತು ಸಹಾಯಧನವಾರು ಪಟ್ಟಿ ಕೊಡುವುದು

ಇ) ಈ ಎಲ್ಲಾ ಮೊಬಲಗಿಗೆ ಬಳಕೆ ಪ್ರಮಾಣ ಪತ್ರ ಸಲ್ಲಿಸಲಾಗಿದೆಯೇ? ಎಲ್ಲಾ ರೀತಿಯ ವೆಚ್ಚಕ್ಕೆ ಆಡಿಟ್ ವರದಿ ಸಲ್ಲಿಸಲಾಗಿದೆಯೇ? ಲೋಪವಾಗಿದ್ದರೆ ಕೈಗೊಂಡಿರುವ ಕ್ರಮವೇನು?

ಈ) ಈ ಸಂಸ್ಥೆಗಳಿಗೆ ಹರಿದುಬರುತ್ತಿರುವ ಹೊರ ದೇಶದ ಸಹಾಯದನವೆಷ್ಟು? ಇದಕ್ಕೆ ನಿಗದಿಪಡಿಸಿರುವ ವಿದೇಶಿ ವಿನಿಮಯ ಧನವೆಷ್ಟು? ವಿದೇಶಿ ವಿನಿಮಯ ಉಲ್ಲಂಘನೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಹೌದಾದರೆ ಅದರ ಪ್ರಮಾಣ ಎಷ್ಟು

ಉ) ಈ ಸಂಸ್ಥೆಗಳಿಗೆ ಸರ್ಕಾರದಿಂದ ನೀಡಲಾಗಿರುವ ವಿನಾಯಿತಿಗಳೆಷ್ಟು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಮೈಸೂರು ಜಿಲ್ಲೆಯಲ್ಲಿ ಒಟ್ಟು 21 ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಯೋಜನೆಯ ಅನುಷ್ಠಾನದಲ್ಲಿ ತೊಡಗಿವೆ. ಸಂಸ್ಥೆಗಳ ವಿವರಗಳ ಪಟ್ಟಿ ಲಗತ್ತಿಸಿದೆ.

ಆ) ಸರ್ಕಾರದಿಂದ ನೀಡಲಾಗುತ್ತಿರುವ ಸಹಾಯಧನದ ವಿವರಗಳು ಮತ್ತು ಕಳೆದ ಮೂರು ವರ್ಷಗಳಲ್ಲಿ ಸಂಸ್ಥೆವಾರು ಮತ್ತು ಸಹಾಯಧನವಾರು ಪಟ್ಟಿಯನ್ನು ಲಗತ್ತಿಸಿದೆ.

ಇ) ಸಲ್ಲಿಸಲಾಗಿದೆ.

ಸಲ್ಲಿಸಲಾಗಿದೆ.

ಲೋಪವಾಗಿರುವುದಿಲ್ಲ.

ಈ) ವಿದೇಶದಿಂದ ಸಹಾಯಧನವು ಹರಿದು ಬಂದಿರುವುದು ತನಿಖಾ ವೇಳೆಯಲ್ಲಿ ಗಮನಕ್ಕೆ ಬಂದಿರುವುದಿಲ್ಲ.

ಉ) ಇಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 4198ಕ್ಕೆ

ಅನುಬಂಧ

ಕ್ರ. ಸಂ.	ಸಂಸ್ಥೆಯ ಹೆಸರು	ಕಳೆದ ಮೂರುವರ್ಷಗಳಿಂದ ನೀಡಲಾಗಿರುವ ಧನಸಹಾಯದ ವಿವರಗಳು		
	ನಿರ್ಗತಿಕ ಮಕ್ಕಳ ಕುಟೀರಗಳು	2001–01	2001–02	2002–03
				ರೂ.ಗಳಲ್ಲಿ
1.	ಆದಿ ಚುಂಚನಗಿರಿ ಅನಾಥಾಲಯ, ಗುರುಕುಲ ನಿರ್ಗತಿಕ ಮಕ್ಕಳ ಕುಟೀರ, ಮಂಡನಕಟ್ಟೆ ಕೆ ಆರ್ ನಗರ ತಾಲ್ಲೂಕು	398445	427140	156746
2.	ಸೈಂಟ್ ಅಂಥೋನಿ, (ಗುಡ್ ಶಫರ್ಡ್) ನಿರ್ಗತಿಕ ಮಕ್ಕಳ ಕುಟೀರ, ಮೈಸೂರು–1	194987	198720	107388
3.	ವೈಶಾಲಿ ಶಿಕ್ಷಣ ಸಂಸ್ಥೆ ನಿರ್ಗತಿಕ ಮಕ್ಕಳ ಕುಟೀರ ಸಿದ್ಧಾರ್ಥನಗರ, ಮೈಸೂರು	106346	106644	–
4.	ಶ್ರೀ ಜೈನ್ ಎಜುಕೇಶನ್ ಸೊಸೈಟಿ ನಿರ್ಗತಿಕ ಮಕ್ಕಳ ಕುಟೀರ ಮೈಸೂರು– (685, ಯರಗನಹಳ್ಳಿ ಬನ್ನೂರು ರಸ್ತೆ)	99785	129375	151398
5.	ರೋಟರಿ ಶಿಕ್ಷಣ ಸಂಸ್ಥೆ, ನಿರ್ಗತಿಕ ಮಕ್ಕಳ ಕುಟೀರ, ಮೈಸೂರು (ರಾಜೀವನಗರ, ಒಂದನೇ ಹಂತ, ಕುವೆಂಪು ನಗರ, ಮೈಸೂರು)	101029	130908	60594
6.	ವಸಂತ ಶಿಕ್ಷಣ ಸಂಸ್ಥೆ ನಿರ್ಗತಿಕ ಮಕ್ಕಳ ಕುಟೀರ ಮೈಸೂರು (ಯರಗನಹಳ್ಳಿ)	–	119940	60654
7.	ಶ್ರೀ ಚಂದ್ರಮೌಳೇಶ್ವರ ಮಲ್ಲಿಕಾರ್ಜುನಸ್ವಾಮಿ ಮಹಾ ವಿದ್ಯಾಸಂಸ್ಥೆ ನಿರ್ಗತಿಕ ಮಕ್ಕಳ ಕುಟೀರ ಮಾದಪುರ, ಹೆಚ್‌ಡಿ ಕೋಟೆ	102893	107126	53280
8.	ಶ್ರೀ ಫಲಹಾರ ಪ್ರಭುದೇವ ಸ್ವಾಮಿ ನಿರ್ಗತಿಕರ ಮಕ್ಕಳ ಕುಟೀರ, ತುಮಕೂರು ಟಿ. ನರಸೀಪುರ	135840	120869	–
9.	ಶ್ರೀ ಮಹಾ ಜೋಡಿ ಮೈತ್ರಿ ಮಂಡಳಿ. ನಿರ್ಗತಿಕ ಮಕ್ಕಳ ಕುಟೀರ, ಸರಸ್ವತಿಪುರಂ, ಮೈಸೂರು, ನಂ. 8 ಈಜುಕೊಳದ ರಸ್ತೆ	204967	211704	–
10.	ಶ್ರೀ ಬೀರೇಶ್ವರ ನಿರ್ಗತಿಕ ಮಕ್ಕಳ ಕುಟೀರ ಹೆಡಿಯಾರ, ನಂಜನಗೂಡು ತಾಲ್ಲೂಕು	199590	193416	107688

11. ಶ್ರೀ ಚಾಮುಂಡಿ ಮಕ್ಕಳ ಮನೆ, ನಿರ್ಗತಿಕ ಮಕ್ಕಳ ಕುಟೀರ ESI ಆಸ್ಪತ್ರೆ ಹಿಂಭಾಗ, ಬೃಂದಾನವ ಬಡಾವಣೆ, ಮೈಸೂರು	78821	97420	54000
12. KSS ನಿರ್ಗತಿಕ ಮಕ್ಕಳ ಕುಟೀರ, ಮಲ್ಲಹಳ್ಳಿ, ನಂಜನಗೂಡು ತಾಲ್ಲೂಕು	211433	154752	49128
13. ಜಗದ್ಗುರು ರೇಣುಕಾಚಾರ್ಯ ನಿರ್ಗತಿಕ ಮಕ್ಕಳ ಕುಟೀರ ಕಾರ್ಪೂರವಳ್ಳಿ ಕೆ.ಆರ್. ನಗರ ತಾಲ್ಲೂಕು ಸಾಂತ್ವನ	164752	213218	215124
14. ಶಕ್ತಿಧಾಮ ಮೈಸೂರು (ಸಾಂತ್ವನ)	–	30000	100000
15. ಮಹಿಳಾ ಸಾಮಖ್ಯಾ (ಸಾಂತ್ವನ)	–	–	120000
16. ಬಾಪೂಜಿ ಮಕ್ಕಳ ಮನೆ ಮೈಸೂರು	185145	229102	223137
ಶಿಶುಪಾಲನಾ ಕೇಂದ್ರ			
17. ಗೌರಿಶಂಕರ ಶಿಶುಪಾಲನಾ ಕೇಂದ್ರ	–	–	41020
18. ಕೆ ಎಸ್ ಎಸ್ ಶಿಶುಪಾಲನಾ ಕೇಂದ್ರ	27000	72000	77485
ಬಾಲ ಕಾರ್ಮಿಕರ ವಿಶೇಷ ಶಾಲೆಗಳು			
19. ಪರಿಸರ ಶಿಕ್ಷಣ ಯೋಜನಾಭಿವೃದ್ಧಿ ಸಂಸ್ಥೆ ಮೈಸೂರು	145400	–	–
20. ಹೋಲ್ಡ್ ವರ್ತ್ ಸೇವಾ ಸಂಸ್ಥೆ ಮೈಸೂರು	–	138400	–
21. ಮಹಾತ್ಮಾಗಾಂಧಿ ಟ್ರಸ್ಟ್ ಮೈಸೂರು	–	–	469284

ಚಾಮರಾಜ ನಗರ ಜಿಲ್ಲೆಯಲ್ಲಿ ರೈತರ ಬೆಳೆ ವಿಮೆ

3179 (3980) ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲೆಯಲ್ಲಿ ಈ ಸಾಲಿನಲ್ಲಿ ರೈತರ ಬೆಳೆ ವಿಮೆ ಸಹಕಾರ ಸಂಘಗಳಿಂದ ಬಂದಂತಹ ಸುಮಾರು 14 ಸಾವಿರಕ್ಕೂ ಹೆಚ್ಚು ಮೇಲ್ಪಟ್ಟು ಅರ್ಜಿಗಳು ಜಿಲ್ಲಾ ಸಹಕಾರ ಬ್ಯಾಂಕ್‌ನಿಂದ ಸಂಬಂಧಪಟ್ಟ ವಿಮಾ ಇಲಾಖೆಗೆ ಸಕಾಲದಲ್ಲಿ ತಲುಪಿಸದೆ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಇದನ್ನು ಸರಿಪಡಿಸುವ ದಿಕ್ಕಿನಲ್ಲಿ ಸರ್ಕಾರದ ಕ್ರಮಗಳೇನು

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಹೌದು

ಆ) ಚಾಮರಾಜನಗರ ಜಿಲ್ಲೆಯ ರೈತರ ಬೆಳೆ ವಿಮೆಗೆ ಸಂಬಂಧಿಸಿದಂತೆ ಜಿಲ್ಲಾ ಬ್ಯಾಂಕಿನಿಂದ ವಿಮಾ ಕಂಪನಿಗೆ ಸಕಾಲದಲ್ಲಿ ಬೆಳೆ ವಿಮೆ ಹಣವನ್ನು ಪಾವತಿಸುವಲ್ಲಿ ಅನಿವಾರ್ಯವಾಗಿ ಆಗಿರುವ ವಿಳಂಬವನ್ನು ಮನ್ನಿಸಿ ಬೆಳೆ ವಿಮೆ ಪ್ರಸ್ತಾವನೆಯನ್ನು ಪುರಸ್ಕರಿಸುವಂತೆ ಸರ್ಕಾರ ಶಿಫಾರಸ್ಸು ಮಾಡಿರುತ್ತದೆ.

ಕರ್ನಾಟಕ ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕೃಷಿ ಮತ್ತು ತೋಟಗಾರಿಕೆ ರವರು ಭಾರತ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು ಕೃಷಿ ಮತ್ತು ಸಹಕಾರ ಇಲಾಖೆ